ಶ್ರೀ ಎ. ರುಕ್ಮಯ್ಯ ಪೂಜಾರಿ:- ಇದು ಬಹಳ ಪ್ರಾಮುಖ್ಯವಾದ ವಿಚಾರ. ನಮಗೆ ಗೊತ್ತಿರುವಹಾಗೆ ಇಷ್ಟರವರೆಗೆ ಬಜೆಟನ್ನು ಮಂಡನೆ ಮಾಡುವ ಮೊದಲೇ ಅದು ಲೀಕೌಟ್ ಆಗಿರಲಿಲ್ಲ. ಇವತ್ತು ಆಗಿದೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ತಾವು ಒಂದು ಅಭಿಪ್ರಾಯ ಕೊಟ್ಟರೆ ಅದು ಎಲ್ಲರಿಗೂ ಅಪ್ಲೈ ಆಗುತ್ತದೋ ಇಲ್ಲವೋ ಎಂಬುದನ್ನು ತಾವು ಹೇಳಬೇಕು ಅಧ್ಯಕ್ಷರೇ, ಅದು ಇವರಿಗೆಲ್ಲಾ ಅಪ್ಲೈ ಆಗುತ್ತದೋ ಇಲ್ಲವೋ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಆದುದರಿಂದ ಇವತ್ತು ಇದರ ಪಾವಿತ್ರ್ಯತೆ ಹೊರಟು ಹೋಗಿದೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ಒಬ್ಬೊಬ್ಬರೂ ಈ ರೀತಿ ಹೇಳುತ್ತಾ ಹೋದರೆ ಹೇಗೆ?

ಶ್ರೀ ಎ. ರುಕ್ಮಯ್ಯ ಪೂಜಾರಿ:- ಆದುದರಿಂದ ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾರತೀಯ ಜನತಾಪಕ್ಷದ ಸದಸ್ಯರುಗಳಾದ ಶ್ರೀ ರುಕ್ಮಯ್ಯ ಪೂಜಾರಿ ಹಾಗೂ ನಾರಾಯಣರಾವ್ ಮನಹಳ್ಳಿ ಇವರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಡಾ. ನಂಜಪ್ಪ.

ಡಾ. ಎನ್.ಬಿ. ನಂಜಪ್ಪ:- ಪ್ರೊಫೆಸರ್ ನಂಜುಂಡಸ್ವಾಮಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಬಜೆಟನ್ನು ಇಟ್ ಈಸ್ ಎ ಸ್ಕ್ಯಾಪ್ ಆಫ್ ಪೇಪರ್ ಎಂದು ಹೇಳಿದರು.

ಅಧ್ಯಕ್ಷರು:- ಪ್ರಶ್ನೋತ್ತರ ಕಾಲ ಆದಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಅವರಿಗೆ ಏನು ಹೇಳಿದ್ದೇನೆ, ನಿಮಗೂ ಅದನ್ನೇ ಹೇಳುತ್ತೇನೆ.

ಡಾ. ಎನ್.ಬಿ. ನಂಜಪ್ಪ:- ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಇದು ಸ್ಕ್ಯಾಂಕ್ಷಿಟಿ ಕಳೆದುಕೊಂಡಿದೆ.

ಅಧ್ಯಕ್ಷರು:- ಪರಿಸ್ಥಿತಿಯ ಸೂಕ್ಷ್ಮತೆ ಎಂದು ನಾನು ಬಹಳ ಸೂಕ್ಷ್ಮವಾಗಿ ಹೇಳಿದೆ. ಈಗ ಪ್ರಶ್ನೋತ್ತರ. ಉಮೇಶ್ ಭಟ್.

ಪ್ರಶ್ನೋತ್ತರ

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು)

ಬೇಡ್ತಿ ಜಲ ವಿದ್ಯುತ್ ಯೋಜನೆ

121(606) ಶ್ರೀ ಕೆ. ಉಮೇಶ್ ಭಟ್ (ಅಂಕೋಲ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೇಡ್ತಿ ಜಲವಿದ್ಯುತ್ ಯೋಜನೆಯ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು? ಹಾಗೂ ಈ ಯೋಜನೆಯ ಬಗ್ಗೆ ನಿರ್ದಿಷ್ಟ ನಿಯಮ ನಿರ್ಣಯಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಅ) ಸರ್ಕಾರವು ಬೇಡ್ತಿ ಯೋಜನೆಯ ಕೆಲಸಗಳನ್ನು ಪೂರ್ಣಜಲಾಶಯ ಮಟ್ಟವನ್ನು 1540 ಅಡಿಗೆ ಇಳಿಸಿ, ಪರಿಸರ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ಪುನರಾರಂಭಿಸಲು ಆದೇಶಿಸಿದೆ. ಪೂರ್ಣ ಜಲಾಶಯ ಮಟ್ಟವನ್ನು ಕಡಿಮೆಗೊಳಿಸಿ ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ಮುಂದಿನ ಕ್ರಮಕ್ಕಾಗಿ ತಯಾರು ಮಾಡಲಾಗುತ್ತಿದೆ.

ಶ್ರೀ ಕೆ. ಉಮೇಶ್‌ಭಟ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಈ ಉತ್ತರ ನನಗೆ ಅಷ್ಟು ತೃಪ್ತಿಕರವಾಗಲಿಲ್ಲ. ಕಾರಣವೇನೆಂದರೆ ಈ ನಿರ್ಣಯ ಬಂದು ಆದನ್ನು ತಡೆಗಟ್ಟಲು ಕಾರಣವೇನೋ ಗೊತ್ತಿಲ್ಲ. ಇದು ಯಾವಾಗ ಮುಗಿಯುತ್ತದೆ? ಎನ್ನತಕ್ಕಂಥ ವಿಚಾರ ಕೂಡ ಇದರಲ್ಲಿ ಇಲ್ಲ. ಅಲ್ಲಿನ ಜನರ ಕೂಗು ಸರ್ಕಾರಕ್ಕೆ ಮುಟ್ಟಿದೆಯೋ ಇಲ್ಲವೋ ಎನ್ನುವ ವಿಚಾರ ಇಲ್ಲ. ಇದನ್ನು ಮಾನ್ಯ ಮಂತ್ರಿಗಳು ದಯಮಾಡಿ ವಿವರಿಸುತ್ತಾರೆಂದು ನಾನು ನಂಬಿದ್ದೇನೆ.